ಮಾಡಿದ್ದು..." ಎನ್ನುತ್ತ ಆ ಧಡೂತಿ ಮನುಷ್ಯ ತನ್ನ ಕೈಯಲ್ಲಿದ್ದ ಕೋಲನ್ನು ಮೇಲಕ್ಕೆತ್ತಿದ. ಇನ್ನೇನು ತನಗೆ ಹೊಡೆತ ಬೀಳುತ್ತದೆಯೆಂದು ಹೆದರಿದ ಇರ್ನ ಗಂಟಲಲ್ಲಿ ಉಸಿರು ಕಟ್ಟಿದಂತಾಗಿ ಕಿಟಾರನೇ ಚೀರಿಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ...

"ಯಾಕೆ ಮಗಳೆ ಏನಾಯ್ತು? ಏನಾದೂರೂ ಕೆಟ್ಟ ಕನಸು ಬಿತ್ತೆ?" ತಾಯಿ ಅವಳನ್ನು ಹತ್ತಿರಕ್ಕೆ ಎಳೆದು ಅಪ್ಪಿಕೊಳ್ಳುತ್ತ ಕೇಳಿದಳು. ಇರ್ನ ಜೋರಾಗಿ ಅಳತೊಡಗಿದಳು.

"ಏ... ಅದಕ್ಯಾಕಮ್ಮ ಹೆದರ್ತೀ? ಏನೋ ಕೆಟ್ಟ ಕನಸು ಬಿದ್ದಿರಬೇಕು. ಮುಗಿದು ಹೋಯ್ತಲ್ಲ ಈಗ ಅದು. ಏಳು ಒಂದಿಷ್ಟು ನೀರು ಕುಡಿದು ಮಲಗಿಕೋ, ಏನೂ ಆಗೋದಿಲ್ಲ" ಎಂದು ಸಮಾಧಾನಪಡಿಸಿದಳು ಅವಳ ತಾಯಿ.

ರವಿವಾರ ಇಡೀ ದಿನ ಇರ್ನ ತನ್ನ ಫೋನನ್ನು ಬಂದ್ ಮಾಡಿ ಇಟ್ಟುಬಿಟ್ಟಳು. 'ಶರ್ಮಿಳಾ ತನ್ನನ್ನು ಏನಾದರೂ ಪ್ರಶ್ನಿಸಿದರೆ ಅವಳಿಗೇನು ಉತ್ತರ ಹೇಳುವುದು? ಹೌದು, ನಾಳೆ ಶಾಲೆಯಲ್ಲಿ ಶರ್ಮಿಳಾ ಕಂಡಕೂಡಲೇ ಅವಳಲ್ಲಿ ಕ್ಷಮೆ ಕೇಳಬೇಕು. ಆದರೆ... ಅವಳು ಈಗಲೇ ಇಲ್ಲಿಗೆ ಬಂದರೆ ಏನು ಮಾಡುವುದು? ಅವಳ ತಂದೆತಾಯಿ ಕೂಡ ಅವಳೊಂದಿಗೆ ಬಂದರೆ ಏನು ಗತಿ? ಅವರು ನನ್ನ ತಂದೆತಾಯಿಯರೊಂದಿಗೆ ಹೊಡೆದಾಡಿದರೆ ಹೇಗೆ? ಇಂಥ ಹೊತ್ತಲ್ಲಿ ನಾನು ಹೊರಗೆ ಹೋಗಿ ಸಿಲೇನಾ ಆಂಟಿಯೊಂದಿಗೆ ಇಡೀ ದಿನ ಕಳೆದರೆ ಒಳ್ಳೆಯದಲ್ಲವೆ?... ಅಯ್ಯೋ... ನಾನು ಹಾಗೇನಾದರೂ ಮಾಡಿದರೆ ಶರ್ಮಿಳಾಳ ತಂದೆತಾಯಂದಿರನ್ನು ನನ್ನ ಅಪ್ಪಅಮ್ಮ ಮಾತ್ರ ಎದುರಿಸಬೇಕಾಗುತ್ತದೆಯಲ್ಲವೆ?... ಇರಲಿ, ಏನಾಗುತ್ತದೆಯೋ ಆಗಲಿ...' ಹೀಗೆ ಏನೇನನ್ನೋ ಯೋಚನೆ ಮಾಡುತ್ತ ಇರ್ನ ತನ್ನ ತಾಯಿಯನ್ನು ಗಟ್ಟಿಯಾಗಿ ಅಪ್ಪಿಕೊಂಡು ಮಲಗಿಬಿಟ್ಟಳು. ತಾಯಿಯ ಕೈಗಳ ಬಿಸಿಯಪ್ಪುಗೆಯಲ್ಲಿ ಮಲಗಿದ ಅವಳಿಗೆ ಆ ರಾತ್ರಿ ಯಾವ ಕನಸೂ ಬೀಳಲಿಲ್ಲ. ಆದರೆ, ಅವಳಿಗೆ ಒಳ್ಳೆಯ ನಿದ್ದೆಯೇನೂ ಬರಲಿಲ್ಲ.

ಶಾಲೆಯನ್ನು ಬೇಗನೇ ತಲುಪಿದ ಇರ್ನ ಪ್ರಾರ್ಥನಾ ಸಭೆಯ ಸಮಯದವರೆಗೆ ಯಾರಿಗೂ ಕಾಣದಂತೆ ಕುಳಿತಳು.

ಶರ್ಮಿಳಾ ತನಗಾಗಿ ಕಾಯುತ್ತಿರಬಹುದೆಂದು ಊಹಿಸಿದ ಅವಳು, ಅವಳ ಕಣ್ಣಿಗೆ ಬೀಳದ ಹಾಗೆ ದೂರದಿಂದಲೇ ಅವಳನ್ನು ನೋಡುತ್ತಿದ್ದಳು. ಪ್ರಾರ್ಥನೆ ಮುಗಿದ ನಂತರ ಇರ್ನ ಸಾಂದ್ರಾಳೊಂದಿಗೆ ಮಾತನಾಡುತ್ತ ನಡೆಯತೊಡಗಿದಳು. ಶರ್ಮಿಳಾ ತನ್ನನ್ನು ದೂರದಿಂದ ಕರೆಯುತ್ತಿದ್ದರೂ ಅದು ಕೇಳಿಸದವರ ಹಾಗೆ ನಟಿಸುತ್ತ ವರ್ಗದ ಕೋಣೆಯ ಒಳಗೆ ನಡೆದುಬಿಟ್ಟಳು. ಆದರೆ ಅವಳು ಬೆಂಚ್ ಮೇಲೆ ಕುಳಿತುಕೊಳ್ಳಬೇಕೆನ್ನುವಷ್ಟರಲ್ಲಿಯೇ ಶರ್ಮಿಳಾ ಅವಳ ಬಳಿಗೆ ಓಡುತ್ತ ಬಂದು –"ಅರೆ, ಇರ್ನ ನಿನ್ನೆ ಮತ್ತು ಮೊನ್ನೆ ನೀನು ಎಲ್ಲಿದ್ದಿಯೇ? ನಾನು ನಿನಗೆ ಅದೆಷ್ಟು ಸಲ ಫೋನ್ ಮಾಡಿದೆ ಗೊತ್ತಾ? ಏನೇ ಯಾಕೆ ಫೋನ್ ತೊಗೊಳ್ಳಿಲ್ಲ? ಹಾಗೇಕೆ ಮಾಡಿದೆ? ...ಏ!! ಇದೇನೇ... ನಿನ್ನ ಕಣ್ಣು ನೋಡಿದರೆ ನೀನು ನಿನ್ನೆ ರಾತ್ರಿ ತಡವಾಗಿ ಮಲಗಿದಂತೆ ಕಾಣ್ತವೆ!! ನನಗೆ ಗೊತ್ತು ಒಂದು ಸಲ ನೀನು ಪುಸ್ತಕ ಓದಲು ಸುರೂ ಮಾಡಿದೆಯೆಂದರೆ ಮುಗಿದೇ ಹೋಯ್ತು. ಅದು ಮುಗಿಯುವವರೆಗೂ ಮಲಗುವವಳಲ್ಲ ನೀನು. ನಿನ್ನೆ ಎಷ್ಟೊತ್ತಿಗೆ ಮಲಗಿದೆಯೆ? ಆ ಪುಸ್ತಕವನ್ನು ಓದಿ ಮುಗಿಸಿಯೇ ಬಿಟ್ಟೆಯಾ?..." ಹೀಗೇ ಬಿಟ್ಟೂಬಿಡದೆ ಪ್ರಶ್ನೆಗಳನ್ನು ಕೇಳುತ್ತಲೇ ಇದ್ದಳು ಶರ್ಮಿಳಾ. ಇನ್ನೇನು ಅವಳ ಪ್ರಶ್ನೆಗಳಿಗೆ ಇರ್ನ ಉತ್ತರಿಸಬೇಕೆನ್ನುವಷ್ಟರಲ್ಲಿಯೇ ಟೀಚರ್ ಕ್ಲಾಸ್‌ರೂಮಿನ ಒಳಗೆ ಬಂದು ಬಿಟ್ಟಿದ್ದರಾದ ಕಾರಣ ಶರ್ಮಿಳಾ ಅಲ್ಲಿಂದ ಹೊರಟು, ತನ್ನ ಜಾಗೆಯಲ್ಲಿ ಕುಳಿತುಕೊಂಡುಬಿಟ್ಟಳು. "ಓ... ದೇವರೆ,